# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1216/2022

| | | | |
|---|---|---|---|
| ಸಾಕ್ಷಿಯ ಹೆಸರು | ಃ ಸತೀಶ್ ಎಂ.ಕೆ. | ಸಿ.ಡಬ್ಲ್ಯೂ ಃ 14 | |
| ತಂದೆ ಹೆಸರು | ಃ ಲೇಟ್ ಕೆಂಗೇಗೌಡ | ಪಿ.ಡಬ್ಲ್ಯೂ ಃ 11 | |
| ವಯಸ್ಸು | ಃ 44 ವರ್ಷ | ಪ್ರಮಾಣೀಕರಿಸಿದ ದಿಃ 15/07/2024 | |
| ವೃತ್ತಿ | ಃ ಪೋಲೀಸ್ ಮುಖ್ಯ ಪೇದೆ | | |
| ವಾಸ | ಃ ಶ್ರವಣಬೆಳಗೊಳ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ನಾನು 2012 ರಿಂದ 2022 ರವರೆಗೆ ಹೊಳೆನರಸೀಪುರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ 16.02.2015 ರಂದು ನಾನು ಮತ್ತು ಚಾಸಾ-15 ರವರು, ಚಾಸಾ-16 ರವರೊಂದಿಗೆ ರಾತ್ರಿ ಗಸ್ತುಗೆಂದು ಇಲಾಖಾ ಜೀಪ್ ನಲ್ಲಿ ರಾತ್ರಿ 10.30 ರಲ್ಲಿ ಠಾಣೆಯಿಂದ ಹೊರಟು ಐಚನಹಳ್ಳಿ, ಏಲೇಚಾಗಹಳ್ಳಿ ಓಡನಹಳ್ಳಿ, ಹಳ್ಳಿಮೈಸೂರು, ಕಲ್ಲಹಳ್ಳಿ, ದೊಡ್ಡಹಳ್ಳಿ, ದೊಡ್ಡಕಾಡನೂರು ಕಡೆ ರೌಂಡ್ಸ್ ಮಾಡಿಕೊಂಡು ವಾಪಸ್ಸು ಠಾಣೆಗೆ ಹೋಗಲು ಬೆಳಗಿನ ಜಾವ 05.30 ರಲ್ಲಿ ಆಲಗೌಡನಹಳ್ಳಿ ಬಳಿ ಬಂದಾಗಾ ಕೆಎ-10-5470 ಟಾಟಾ ಎಸ್ ನ ವಾಹನ ಚಾಲಕ ನಮ್ಮ ಜೀಪ್ ಅನ್ನು ನೋಡಿ, ಹಮ್ಸ್ ಅನ್ನು ನಿಲ್ಲಿಸಿಕೊಂಡು ಜೋರಾಗಿ ವಾಹನವನ್ನು ಚಾಲಾಯಿಸಿಕೊಂಡು ಹೋಗಿ ದೊಡ್ಡಕಾಡನೂರು ಗ್ರಾಮದ ಹತ್ತಿರ ಅವರನ್ನು ಅಡ್ಡ ಹಾಕಿ ನಿಲ್ಲಿಸಿ ಅವರನ್ನು ವಾಹನದಲ್ಲಿ ಇದ್ದ 4 ಜನರನ್ನು ವಿಚಾರ ಮಾಡಲಾಗಿ, ಒಬ್ಬರು ಹಾಸನದಿಂದ ಮೈಸೂರಿಗೆ ಬಾಡಿಗೆ ಹೋಗುತ್ತಿದ್ದೆ, ಇನ್ನೊಬ್ಬ ಹೊಳೆನರಸೀಪುರದಿಂದ ಮೈಸೂರಿಗೆ ಪಾರ್ಟಿಗೆ ಹೋಗುತ್ತಿದ್ದೇವೆ ಎಂದು ಹೇಳಿದರು, 4 ಜನರು ಸಮಂಜಸ ಉತ್ತರ ನಿಡದೇ ಇದ್ದುದ್ದರಿಂದ ವಾಹನವನ್ನು ಪರಿಶೀಲಿಸಿ ಕ್ಲಿನರ್ ಕುಳಿತುಕೊಳ್ಳುವ ಜಾಗದ ಹತ್ತಿರ ಒಂದು ಬಿಳಿ ಚೀಲ ಇತ್ತು, ಆ ಚೀಲವನ್ನು ಪರಿಶೀಲಿಸಲಾಗಿ, ಆ ಚೀಲದಲ್ಲಿ ಮಧ್ಯ ತುಂಬಿದ ದೊಡ್ಡ ಬಾಟೆಲ್, ಚಿಕ್ಕ ಬಾಟೆಲ್ ಹಾಗೂ ಟೆಟ್ರಾ ಪ್ಯಾಕೆಟ್ ಗಳು ಇತ್ತು. ಸದರಿ ಮಧ್ಯದ ಬಾಟೆಲ್ ಗಳ ಬಗ್ಗೆ ವಿಚಾರ ಮಾಡಲಾಗಿ, ಒಬ್ಬನು ಹಾಸನದಿಂದ ಮೈಸೂರಿಗೆ ಪಾರ್ಟಿ ಮಾಡಲು ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು, ಮತ್ತೊಬ್ಬನು ಹೊಳೆನರಸೀಪುರದಿಂದ ತೆಗೆದುಕೊಂಡು ಹೋಗುವುದಾಗಿ ತಿಳಿಸಿದ್ದು, ಇವರ ಮೇಲೆ ಅನುಮಾನ ಬಂದು 4 ಜನರನ್ನು ಹಾಗೂ ಟಾಟಾ ಎ.ಎಸ್. ವಾಹನವನ್ನು ಠಾಣೆಗೆ ತಂದು ಕೂಲಂಕುಷವಾಗಿ ವಿಚಾರ ಮಾಡಲಾಗಿ, 4 ಜನರು ಸೇರಿ ಈಗ್ಗೆ 3 ತಿಂಗಳ ಹಿಂದೆ ಹೊಳೆನರಸೀಪುರ ಟೌನ್ ಎಂ.ಎಸ್.ಐ.ಎಲ್ ಅಂಗಡಿಯಲ್ಲಿ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡ ಮೇರೆಗೆ ಇವರನ್ನು ಮತ್ತು ವಾಹನ, ಮಧ್ಯವನ್ನು ಸಿ.ಪಿ.ಐ.ರವರ ಮುಂದೆ ಹಾಜರುಪಡಿಸಿ ವರದಿಯನ್ನು ಸಲ್ಲಿಸಿರುತ್ತೇನೆ.

ನಂತರ ದಿನಾಂಕಃ 17.02.2015 ರಂದು ಸಿ.ಪಿ.ಐ. ರವರು ವಾಹನದಲ್ಲಿ ಬಿಳಿ ಚೀಲದಲ್ಲಿ ಇದ್ದ ಮದ್ಯವನ್ನು ಪರೀಶೀಲಿಸಲಾಗಿ ರಾಯಲ್ ಚಾಲೆಂಜ್ ವಿಸ್ಕಿ 700 ಎಂ.ಎಲ್.ನ 5 ಬಾಟೆಲ್ ಗಳು, ಒಂದೊಂದು ಬಾಟೆಲ್ ಬೆಲೆ 695.64 ರೂ.ಗಳು ಎಂದು ಬರೆದಿರುತ್ತದೆ. ನಂಬರ್ 1 ಎಂ.ಸಿ. ಡೊವೆಲ್ಸ್ ಬ್ರ್ಯಾಂಡಿ 375 ಎಂ.ಎಲ್. ನ 9 ಬಾಟೆಲ್ ಗಳು, ಒಂದೊಂದು ಬಾಟೆಲ್ ಬೆಲೆ 209.77 ರೂ.ಗಳಾಗಿರುತ್ತದೆ. ಎಂ.ಸಿ. ಡೊವೆಲ್ಸ್ ಬ್ರ್ಯಾಂಡಿ 180 ಎಂ.ಎಲ್. ನ 11 ಟೆಟ್ರಾ ಪ್ಯಾಕೆಟ್ ಗಳು, ಒಂದೊಂದು ಬಾಟೆಲ್ ಬೆಲೆ 101.48 ರೂ.ಗಳಾಗಿರುತ್ತದೆ. ಮತ್ತು ಕೆಎ-10-5470 ವಾಹನ ಟಾಟಾ ಎ.ಸಿ. ವಾಹನ ರಮೇಶ್ ಬಳಿ ಇದ್ದ 1 ಕೆಂಪು ಬಣ್ಣದ ಟಾರ್ಚ್ ಮಧು ಬಳಿ ಇದ್ದ ಸಿಮ್ ಇಲ್ಲ ಒಂದು ಕಪ್ಪು ಬಣ್ಣದ ನೋಕಿಯ ಮೊಬೈಲ್ ಅನ್ನು ಪಂಚರ ಸಮಕ್ಷಮ ಅಮಾನತುಪಡಿಸಿಕೊಳ್ಳಲಾಯಿತು. ಸದರಿ ಮಹಜರಿಗೆ ನಾನು ಕೂಡ ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ-15, 9 ಮತ್ತು 10 ರವರುಗಳು ಸಹ ಸಹಿ ಮಾಡಿರುತ್ತಾರೆ. ಸದರಿ ಮಹಜರನ್ನು ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಮಾಡಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆಯನ್ನು ಸಹ ನೀಡಿರುತ್ತೇನೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-4 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ. 1 ರಿಂದ 76 ಅನ್ನು ನೋಡಿ ಗುರುತಿಸಿರುತ್ತಾರೆ .

ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಾದ ಶ್ರೀ ಹೆಚ್.ಟಿ.ಆರ್. ವಕೀಲರಿಂದಃ

ಸದರಿ ದಿನ ಒಡನಹಳ್ಳಿ ಗ್ರಾಮಕ್ಕೆ ಗಸ್ತಿಗೆ ಎಂದು ಹೋದಾಗಾ 12.00 ಗಂಟೆ ಆಗಿತ್ತು. ಐಚನಹಳ್ಳಿ ಗ್ರಾಮಕ್ಕೆ ಹೋದಾಗಾ ಸಮಯ 11.00 ಗಂಟೆ ಆಗಿತ್ತು. ದೊಡ್ಡಕಾಡನೂರಿಗೆ ಹೋದಾಗಾ ಬೆಳಿಗ್ಗೆ 05.00 ಗಂಟೆ ಆಗಿತ್ತು. ನಾವು ಗಸ್ತಿಗೊಂದು ಹೋದಾಗಾ ಪ್ರತಿ ಊರಿನಲ್ಲಿ 15 ನಿಮಿಷ, 30 ನಿಮಿಷ, 45 ನಿಮಿಷ ಇರುತ್ತೇದೇವು. ಸದರಿ ಸಮಯದಲ್ಲಿ ಊರಿನಲ್ಲಿ ಗಸ್ತು ಮಾಡುತ್ತಿದ್ದರು. ಸದರಿ ದಿನದಂದು ನಾವು ಗಸ್ತು ಮಾಡಿತ್ತಿದ್ದ ಬಗ್ಗೆ ನಮ್ಮ ಪಿ.ಎಸ್.ಐ.ರವರಿಗೆ ವರದಿ ನೀಡಿಲ್ಲ. ಆಲಗೌಡನಹಳ್ಳಿ ಗ್ರಾಮಕ್ಕೆ ಮೈಸೂರು ಕಡೆಯಿಂದ ಬಂದೇವು. ದೊಡ್ಡಕಾಡನೂರಿನಿಂದ ಹಾರಗೌಡನಹಳ್ಳಿಗೆ ಬರುವಷ್ಟರಲ್ಲಿ 2-3 ವಾಹನಗಳು ಹಾದು ಹೋಗಿರುತ್ತದೆ, ಸದರಿ ವಾಹನಗಳ ಸಂಖ್ಯೆ ಗೊತ್ತಿಲ್ಲ. ನಾನು ಸದರಿ ದಿನದಂದು ಯಾವುದೇ ಗಸ್ತಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆ ದಿನದಂದು ಅಮಾನತುಪಡಿಸಿಕೊಂಡ ವಾಹನವನ್ನು ರಮೇಶ್ ಅಲಿಯಾಸ್ ರಾಧಕೃಷ್ಣ ಎಂಬುವವನು ಚಾಲನೆ ಮಾಡುತ್ತಿದ್ದನು. ಸದರಿ ದಿನದಂದು ರಮೇಶ್ ಅಲಿಯಾಸ್ ರಾಧಕೃಷ್ಣ ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಿನದಂದು 4 ಜನರು ಸಹ ಮುಂಭಾಗದ ಸೀಟ್ ನಲ್ಲಿ ಕುಳಿತಿದ್ದರು. ಡ್ರೈವರ್ ಸೀಟ್ ನ ಪಕ್ಕ ಯಾರು ಕುಳಿತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಡೋರ್ ಪಕ್ಕ ಯಾರು ಕುಳಿತಿದ್ದರು ಎಂದು ಗೊತ್ತಿಲ್ಲ. ಸದರಿ ದಿನದಂದು ಉಳಿದವರು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದರು ಎಂದು ಹೇಳಲು ಆಗುವುದಿಲ್ಲ. ನಾವು ಅಮಾನತುಪಡಿಸಿಕೊಂಡ ಸ್ಥಳದ ಪಕ್ಕದಲ್ಲಿ ಒಂದು ಪೆಟ್ಟಿಗೆ ಅಂಗಡಿ ಇತ್ತು. ನಾವು ಆರೋಪಿಗಳನ್ನು

ಹಿಡಿದುಕೊಂಡ ಸಂದರ್ಭದಲ್ಲಿ ಸಮಯ 05.30 ಆಗಿತ್ತು. ಸಮಯ 05.30 ಕ್ಕೆ ದೊಡ್ಡಕಾಡನೂರು ವೃತ್ತದಲ್ಲಿ ಸಾಕಷ್ಟು ಜನರು ಸೇರಿದ್ದರು ಎಂದರೆ ಸರಿ. ಸುಮಾರು 01 ರಿಂದ 01 1/4 ಗಂಟೆಯವರೆಗೆ ಆರೋಪಿಗಳನ್ನು ವಿಚಾರಣೆ ಮಾಡಿರುತ್ತೇವೆ. ಆ ಸಮಯದಲ್ಲಿ ಊರಿನ ಜನರು ಬಂದಿರಲಿಲ್ಲ. ತಪಾಸಣೆ ಮಾಡುವ ಸಮಯದಲ್ಲಿ ನಾನಾಗಲೀ ಅಥವಾ ನನ್ನ ಮೇಲಾಧಿಕಾರಿಗಳಾಗಲೀ ವಿಡೀಯೋ ಚಿತ್ರೀಕರಣ ಮಾಡಿಲ್ಲ. ಆ ಸಂದರ್ಭದಲ್ಲಿ ಮಹಜರು ಮಾಡಲಿಲ್ಲ. ನಾವು ಸದರಿ ಕೃತ್ಯ ದಿನದಂದು ಯಾವುದೇ ಆರೋಪಿಗಳನ್ನು ಹಿಡಿಯಲಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಮಾನತುಪಡಿಸಿಕೊಂಡ ಮದ್ಯಗಳು ಯಾವ ಬ್ಯಾಚ್ ನವು ಎಂದು ಹೇಳಲು ಆಗುವುದಿಲ್ಲ. ನಿಪಿ-4ರ ಬರವಣಿಗೆಯನ್ನು ಸಿ.ಪಿ.ಐ.ರವರ ಸಹಾಯಕ ಹರೀಶ್ ರವರು ಬರೆದಿರುತ್ತಾರೆ. ಸದರಿ ದಿನದಂದು ಹರೀಶ್ ರವರು ಮಹಜರಿಗೆ ಸಹಿ ಮಾಡಲಿಲ್ಲ. ನಮ್ಮ ಠಾಣೆಗೆ ಜನರು ಯಾವಾಗಲು ಬರುತ್ತಾರೆ ಮತ್ತು ಹೋಗುತ್ತಾರೆ ಎಂದರೆ ಸರಿ. ನಮ್ಮ ಠಾಣೆಯ ಹಿಂಭಾಗ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಆ ಸಮಯದಲ್ಲಿ ನಮ್ಮ ಠಾಣೆಯ ಅಕ್ಕ-ಪಕ್ಕದ ಮನೆಯವರನ್ನು ಸಾಕ್ಷಿದಾರರಾಗಿ ಪಡೆದುಕೊಂಡಿಲ್ಲ. ಸದರಿ ದಿನದಂದು ಯಾವುದೇ ಮಹಜರು ಕ್ರಮವನ್ನು ಮಾಡಿಲ್ಲ ಎಂದರೆ ಸರಿಯಲ್ಲ ಅದೇ ರೀತಿ ಮಹಜರಿನಲ್ಲಿ ಏನು ಬರವಣಿಗೆಯಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ವಾಹನ ಹಿಂಭಾಗ ಟೈರ್ ಟೈಗರ್ ಎಂದು ಆಂಗ್ಲಭಾಷೆಯಲ್ಲಿ ಅಪ್ಪಾಜಿ ಎಂದು ಬರೆದಿರುತ್ತದೆ. ವಾಹನ ಎಡಭಾಗದ ಮಧ್ಯದಲ್ಲಿ ಸಿ.ಬಿ.ಐ. ಎಂದು ಬರೆದಿತ್ತು. ವಾಹನ ಮುಂಭಾಗದ ಮಿರರ್ ಬಳಿ ಬೀರಲಿಂಗೇಶ್ವರ ಪ್ರಸನ್ನ ಮತ್ತು ಅಪ್ಪ ಅಮ್ಮನ ಆಶೀರ್ವಾದ ಎಂದು ಬರೆದಿತ್ತು. ಸದರಿ ವಾಹನದ ಚಾಸಿ ನಂಬರ್ ಎಂಎಟಿ-445222 ಬಿಜಡ್‌ಬಿ 13881, ಇಂಜಿನ್ ನಂಬರ್ ನೆನಪಿಲ್ಲ. ನಿಪಿ-4 ಕ್ಕೆ ನಾನು ಮತ್ತು ಚಾಸಾ-15 ಹಾಗೂ ಇಬ್ಬರು ಪಂಚರು ಚಾಸಾ-9 ಮತ್ತು 10 ಹಾಗೂ 4 ಜನ ಆರೋಪಿಗಳು ಸಹಿ ಮಾಡಿರುತ್ತೇವೆ.

ನಾನು ಯಾವುದೇ ಅಮಾನತು ಮಹಜರಿಗೆ ಸಹಿ ಮಾಡದೇ ಇದ್ದರೂ ನನ್ನ ಮೇಲಾಧಿಕಾರಿಗಳ ಮಾತುಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗಳನ್ನು ಇದೇ ಮೊದಲ ಬಾರಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ. 1 ರಿಂದ 76 ಗಳನ್ನು ನಾನು ನೋಡಿಲ್ಲ, ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಮು.ಮಾ. 1 ರಿಂದ 76 ಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ಉಳಿದ ಆರೋಪಿಗಳ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲಾಗಿ ಅಳವಡಿಸಿಕೊಂಡಿರುತ್ತಾರೆ)

<u>ಮರು ವಿಚಾರಣೆ ಇಲ್ಲಃ</u>
(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ